

ಕೊಡುತ್ತಿದ್ದೇನೆ' ಎಂದರು.

'ನಮಸ್ಕಾರ, ಪರ್ವಾಗಿಲ್ಲ ಹೇಳಿ' ಅಂದೆ.

'ಒಂದು ಯು.ಡಿ.ಆರ್ ಕೇಸ್ ಆಗಿದೆ. ಅದರ ಇನ್‌ಕ್ವೆಸ್ಟ್ ಆಗಬೇಕು. ತಹಶೀಲ್ದಾರರು ಹೆಡ್‌ಕ್ವಾಟರ್‌ನಲ್ಲಿ ಇಲ್ಲ ಸರ್. ನಾನು ಸ್ಪಾಟ್‌ನಲ್ಲಿದ್ದೇನೆ. ನೀವು ಬಂದ್ರೆ ಅನುಕೂಲ ಆಗುತ್ತೆ ಸರ್. ಇಲ್ಲಿಗೆ ಬರೋಕೆ ನಿಮಗೆ ಬರೀ ಇಪ್ಪತ್ತು ನಿಮಿಷದ ದಾರಿ ಸರ್' ಎಂದು ರಿಕ್ವೆಸ್ಟ್ ಮಾಡಿದರಾದರೂ ನೀವು ಬರಲೇಬೇಕು ಎಂದು ನನ್ನ ಕರ್ತವ್ಯವನ್ನು ನೆನಪಿಸಿದಂತಿತ್ತು ನಾಯಕ್ ಮಾತು.

ಮೊಬೈಲಲ್ಲೇ ಟೈಂ ನೋಡಿದೆ. ಎಂಟಾಗಿತ್ತು. 'ಒಂಬತ್ತಕ್ಕೆ ಅಲ್ಲಿರ್ತೀನಿ' ಎಂದು ಹೇಳಿ, ಡ್ರೈವರ್ ಪಂಪಾಪತಿಗೆ ಕಾಲ್ ಮಾಡಿ ಬರೋಕೆ ಹೇಳಿ, ಬ್ರಶ್ ಮೇಲೆ ಪೇಸ್ಟ್ ಮಲಗಿಸಿ ಬಾತ್‌ರೂಂಗೆ ಹೋಗಿ ಲಾಕ್ ಆದೆ. ಸ್ನಾನ ಮಾಡಲಿಲ್ಲ. ಬರಿ ಮುಖ ತೊಳೆದೆ, ಇನ್‌ಕ್ವೆಸ್ಟ್ ಮುಗಿಸಿ ಬಂದ ನಂತರ ಸ್ನಾನ ಮಾಡುವುದೆಂದು ನಿರ್ಧರಿಸಿದೆ. ಹೆಣ ನೋಡಿದ ಮೇಲೆ ಸ್ನಾನ ಮಾಡಿಯೇ ಮುಂದಿನ ಕೆಲಸ ಎನ್ನುವ ಅವ್ವನ ಆದೇಶ ಈಗ್ಲೂ ಮನಸ್ಸಿನ ಮೂಲೆಯಲ್ಲಿದೆ.

ಬಟ್ಟೆ ಹಾಕಿಕೊಂಡು ನಾನು ಬಾಗಿಲು ತೆರೆದೆ. ಪಂಪಾಪತಿ ಟಾಟಾ ಸುಮೋದ ಮುಂದೆ ನಿಂತು ನಮಸ್ಕರಿಸಿದರು. ಪ್ರತಿ ನಮಸ್ಕರಿಸಿ ಕಾರು ಹತ್ತಿದೆ.

ತಹಶೀಲ್ದಾರ್ ಮತ್ತು ಎ.ಸಿ. ಆದವರಿಗೆ ಇನ್‌ಕ್ವೆಸ್ಟ್ ಮಾಡುವುದು, ಡೈಯಿಂಗ್ ಡಿಕ್ಲರೇಷನ್ ಪಡೆಯುವುದು ಸ್ವಲ್ಪ ತಲೆನೋವಿನ, ಕಿರಿಕಿರಿಯ ಕೆಲಸ. ಸಾಮಾನ್ಯವಾಗಿ ತಹಶೀಲ್ದಾರರೆ ಇದನ್ನೆಲ್ಲಾ ಮಾಡುತ್ತಾರೆ. ಅಂದು ತಹಶೀಲ್ದಾರ್ ಮಂಜುನಾಥ್ ಚಿತ್ರದುರ್ಗದ ತಮ್ಮ ಸ್ವಗ್ರಾಮಕ್ಕೆ ಹೋಗಿ ಬರುವುದಾಗಿ ತಿಳಿಸಿದ್ದರು. 'ಹೋಗಿ ಬನ್ನಿ. ನಾನು ಇರ್ತೀನಿ. ನೋಡ್ಕೋತೀನಿ' ಎಂದು ಹೇಳಿದ್ದೆ. ಜಿಲ್ಲಾ ಕೇಂದ್ರದಲ್ಲಿ ಕೆಲಸ ಮಾಡುವ ತಹಶೀಲ್ದಾರರಿಗೆ ಆತ್ಮಹತ್ಯೆ, ಯುಡಿಆರ್ ಪ್ರಕರಣಗಳನ್ನು ಅಟೆಂಡ್ ಮಾಡುವುದು ಮಾಮೂಲು. ವಿಷ ಕುಡಿದ, ಬೆಂಕಿ ಹಚ್ಚಿಕೊಂಡ, ಕಾರಣವೇ ತಿಳಿಯದೆ ಸಂಭವಿಸಿದ ಅಪಾಯಕಾರಿ ಪ್ರಕರಣಗಳಲ್ಲಿ ಚಿಕಿತ್ಸೆ ನೀಡುವ ವ್ಯವಸ್ಥೆ, ಬ್ಲಡ್ ಬ್ಯಾಂಕ್ ತಾಲ್ಲೂಕು ಆಸ್ಪತ್ರೆಗಳಲ್ಲಿ ಇರೋದಿಲ್ಲ. ಹಾಗಾಗಿ ಜಿಲ್ಲಾ ಆಸ್ಪತ್ರೆಗಳನ್ನು ಅವಲಂಬಿಸುವುದು ಅನಿವಾರ್ಯ.

ಮೂರು ವರ್ಷದ ಹಿಂದೆ ಮದುವೆಯಾಗಿದ್ದ ಯುವತಿಯ ಯುಡಿಆರ್ ಎಂದು ಸಬ್ ಇನ್‌ಸ್ಪೆಕ್ಟರ್ ನಾಯಕ್ ಹೇಳಿದ್ದರು. ಮದುವೆಯಾದ ಏಳು ವರ್ಷಗಳ ಒಳಗೆ ಹೆಣ್ಣಿನ ಅಸಹಜ ಸಾವು ಸಂಭವಿಸಿದಲ್ಲಿ ಸಿ.ಆರ್.ಪಿ.ಸಿ ನಿಯಮದಂತೆ ಪ್ರಾಥಮಿಕ ತನಿಖೆ ಮಾಡಿ ನ್ಯಾಯಾಲಯಕ್ಕೆ ವರದಿ ಸಲ್ಲಿಸುವ ಜವಾಬ್ದಾರಿ ಎ.ಸಿ. ಮತ್ತು ತಹಶೀಲ್ದಾರ್ ಪಾಲಿನದ್ದು. ಪೊಲೀಸರು ವಿಚಾರಣೆ ನಡೆಸಿ ದೋಷಾರೋಪ ಪಟ್ಟಿ ಸಲ್ಲಿಸಿದ ಎಷ್ಟೋ ವರ್ಷಗಳ ಬಳಿಕ ನ್ಯಾಯಾಲಯದಲ್ಲಿ ವಿಚಾರಣೆ ಪ್ರಾರಂಭವಾಗುತ್ತದೆ. ಇನ್‌ಕ್ವೆಸ್ಟ್ ಮಾಡಿದ ಅಧಿಕಾರಿ ವಿಚಾರಣೆಗೆ ಹಾಜರಾಗಬೇಕು. ಸಾಕ್ಷ್ಯ ನುಡಿಯಬೇಕು. ಆಪಾದಿತರ ಪರ ವಕೀಲರ ಅಡ್ಡ ವಿಚಾರಣೆ ಎದುರಿಸಬೇಕು. ಇದೆಲ್ಲಾ ನಮ್ಮ ನೆನಪಿನ ಶಕ್ತಿಗೆ ಒಂದು ಸವಾಲು.

ಮನೆ ಮಗಳನ್ನು ಕಳೆದುಕೊಂಡ ಹೊತ್ತಲ್ಲಿ ಮನೆಯವರೆಲ್ಲಾ ರೋಷಾವೇಶದಲ್ಲಿರುತ್ತಾರೆ. ಗಂಡ ಮತ್ತು ಅವನ ಮನೆಯವರನ್ನು ಪೊಲೀಸರು ಅರೆಸ್ಟ್ ಮಾಡಿದರೂ ಆ ರೋಷಾವೇಶ ಕಮ್ಮಿ ಆಗುವುದಿಲ್ಲ. ಆದರೆ, ವರ್ಷಗಳು ಕಳೆದು ನ್ಯಾಯಾಲಯದಲ್ಲಿ ವಿಚಾರಣೆ ಶುರುವಾಗುವ ಹೊತ್ತಿಗೆ ರೋಷಾವೇಶದ ಪಸೆಯೂ ಇಲ್ಲದಂತಾಗಿರುವ ನೂರಾರು ಪ್ರಕರಣಗಳು ನನಗೆ ಗೊತ್ತಿತ್ತು. ಸತ್ತ ಮಹಿಳೆಗೆ ಮಕ್ಕಳಿದ್ದರೆ, ಮಕ್ಕಳ ಭವಿಷ್ಯದ ನೆಪವೊಡ್ಡಿ ಗಂಡನದು ಏನೂ ತಪ್ಪಿಲ್ಲವೆಂದು ತಪ್ಪನ್ನೆಲ್ಲಾ ಹೊಟ್ಟೆಗೆ ಹಾಕಿಕೊಳ್ಳುವವರು, ದೇವರ ತಲೆಗೆ ಸುತ್ತಿ ಅನಿವಾರ್ಯವಾಗಿ ಗ್ರಹಚಾರದ ಗೋಡೆಗೆ ಒರಗಿಕೊಳ್ಳುವವರೇ ಹೆಚ್ಚು. ಶವ ಪಕ್ಕದಲ್ಲಿ ಇದ್ದಾಗಲೂ ಪೊಲೀಸರಿಗೆ ದೂರು ಕೊಡುವ ಮುನ್ನವೇ, ಹಣ ಪಕ್ಕಕ್ಕಿಟ್ಟು ರಾಜಿ ಮಾಡಿಕೊಳ್ಳುವ ಪ್ರಕರಣಗಳೂ ಕಡಿಮೆಯೇನಿಲ್ಲ. 'ಸತ್ತವಳು ದೇವ್ರ ಪಾದ ಸೇರುದ್ಲು... ಅವ್ಳೇನು ವಾಪಾಸ್ ಬರಲ್ಲ. ಇರೋರಾದ್ರೂ ನೆಟ್ಟಗೆ ಬಾಳಲಿ' ಎಂಬುದು ಪ್ರಾಪಂಚಿಕ ಬದುಕಿನ ನ್ಯಾಯ ನಿರ್ಣಯದ ಪದ್ಧತಿಯಾಗಿದೆ.

ದಾರಿಯುದ್ದಕ್ಕೂ ತಲೆಯೊಳಗೆ ಇವೆಲ್ಲಾ ಓಡುತ್ತಿದ್ದವು. ನೇಣು ಹಾಕಿಕೊಂಡ, ಸಾಯಿಸಿ ನೇಣಿಗೇರಿಸಿದ, ಬೆಂಕಿ ಹಚ್ಚಿಕೊಂಡ, ಬೇರೆಯವರು ಹಚ್ಚಿದ ಹೊಡೆತದಿಂದ ಮೃತಪಟ್ಟ ಹೆಣ್ಣುಮಕ್ಕಳ ಮುಖಗಳು ಒಂದು ಸುತ್ತು ನೆನಪಿಗೆ ಬಂದವು. ಪಂಪಾಪತಿಗೆ ವಾಹನ ನಿಲ್ಲಿಸಲು ಹೇಳಿದೆ. ರಸ್ತೆಯ ಎಡಭಾಗದಲ್ಲಿ ವಾಹನ ನಿಂತಿತು. ಥರ್ಮಾಫ್ಲಾಸ್ಕ್ ತೆಗೆದು ಎರಡು ಗ್ಲಾಸ್ ನೀರು ಕುಡಿದೆ. ವಾಹನದಿಂದಿಳಿದು ರಸ್ತೆಯ ಇಕ್ಕೆಲಗಳನ್ನು ಗಮನಿಸಿದೆ. ಹೊಸಪೇಟೆ ಮತ್ತು ಬಳ್ಳಾರಿ ರಸ್ತೆ ತುಂಬ ಅದಿರು ತುಂಬಿದ ಲಾರಿಗಳ ದರ್ಬಾರು. ಕಾರು, ಬೈಕುಗಳು ಎರಡನೇ ದರ್ಜೆ ಪ್ರಜೆಗಳಂತೆ ಅದಿರಿನ ಲಾರಿಗಳನೊಡನೆ ಪೈಪೋಟಿಗಿಳಿದು ತಮ್ಮ ದಾರಿಗೆ ಜಾಗ ಹೊಂದಿಸಿಕೊಳ್ಳಬೇಕಾಗಿತ್ತು. ರಸ್ತೆಯಗಲಕ್ಕೂ ಬೆಳೆದು ನಿಂತ ಬಾಳೆ ಎಲೆಗಳ ಮೈತುಂಬ ಮೆತ್ತಿಕೊಂಡ ಅದಿರಿನ ದೂಳು ಅವುಗಳ ಅಂದಗೆಡಿಸಿತ್ತು. ಇದು ಕೃಷ್ಣದೇವರಾಯ